160

ಬಲಿ ಬಂಧನ

(ಪೌರಾಣಿಕ ಏಕಾಂಕ ನಾಟಕ)

★

ರಚಯಿತರು:

ಶ್ರೀ| ಎಸ್. ತಿರುಮಲೇಶ್ವರ ಭಟ್,

ವಿದ್ವಾನ್, ಮಂಗಳೂರು.

1957.

ಒಂದಾಣೆ ಮಾಲೆ

ಪ್ರತಿ ವಾರವೂ ಕೊಂಡುಕೊಳ್ಳಿರಿ!

"ಒಂದಾಣೆ ಮಾಲೆ"ಯ ಪುಸ್ತಕಗಳು, ಪ್ರತಿ ವಾರ ಪ್ರಕಟವಾಗುತ್ತಿವೆ. ಹೊಸ ಹೊಸ ವಿಷಯಗಳ ಮೇಲೆ ಪುಸ್ತಕಗಳು ಹೊರಡುತ್ತಿವೆ. 1954ನೇ ಸಪ್ಟಂಬರದಿಂದ 1957ನೇ ನವಂಬರ ತಿಂಗಳ ಮೊದಲನೆಯ ವಾರದ ವರೆಗೆ 160 ಪುಸ್ತಕಗಳು ಪ್ರಕಟವಾಗಿದ್ದು, ಇನ್ನೂ ಪ್ರತಿ ವಾರ ಒಂದೊಂದು ಹೊಸ ಪುಸ್ತಕ ಹೊರಡುತ್ತಲೇ ಇದೆ.

160 ಆಣೆಗಳಿಗೆ 'ಒಂದಾಣೆ ಮಾಲೆ'ಯು, ಹೊದಿಕೆ ಕೂಡಿ, ಒಟ್ಟು 3338 ಪುಟಗಳನ್ನು ಕೊಟ್ಟಿರುತ್ತದೆ. ಇಷ್ಟು ಮೊಬಲಗಿಗೆ ಇಷ್ಟು ಪುಟಗಳನ್ನು ಬೇರೆ ಎಲ್ಲಿಯೂ ಯಾವ ಪ್ರಕಟಣೆಯೂ ಕೊಟ್ಟಿಲ್ಲ.

ವಿದ್ವಾಂಸರು ಮಾತ್ರ 'ಒಂದಾಣೆಮಾಲೆ'ಗೆ ಬರೆಯುತ್ತಾರೆ. 'ಅಶ್ಲೀಲ' ಎಂಬ ಅಂಶವೇ ಒಂದಾಣೆಮಾಲೆ'ಯ ಪ್ರಕಟಣೆಗಳಲ್ಲಿರುವುದಿಲ್ಲ.

'ಒಂದಾಣೆಮಾಲೆ' ಪುಸ್ತಕಗಳು ಚಿಕ್ಕ ವಿದ್ಯಾರ್ಥಿಗಳಿಂದ ವಯೋವೃದ್ಧರ ವರೆಗೆ, ಪ್ರತಿಯೊಬ್ಬನಿಗೂ ಅವಶ್ಯ ಇವೆ. ಇಷ್ಟು ಸುಲಭ ಬೆಲೆಯಲ್ಲಿ ಇಷ್ಟು ಉತ್ತಮ ಸಾಹಿತ್ಯವು, ಈ ಮೊದಲು ಎಲ್ಲಿಯೂ ಒದಗಿಸಲ್ಪಟ್ಟಿಲ್ಲ.

'ಒಂದಾಣೆ ಮಾಲೆ' ಪುಸ್ತಕಗಳನ್ನು ಟಪ್ಪಾಲು ದ್ವಾರಾ ತರಿಸಿಕೊಳ್ಳುವವರು ರೂ. 4 – 8 – 0ನ್ನು ಮನಿಯಾರ್ಡರ್ ಮೂಲಕ ಕಳಿಸತಕ್ಕದ್ದು. ಡಿಪಾಜಿಟ್ ಇಡುವವರು ಮಾತ್ರ ಏಜನ್ಸಿಗಾಗಿ ಬರೆದುಕೊಳ್ಳತಕ್ಕದ್ದು.

ವಾರಕ್ಕೆ ಕೇವಲ ಒಂದಾಣೆ ವ್ಯಯದಿಂದ ಒಂದು ಉತ್ಕೃಷ್ಟ–ಉಪಯುಕ್ತ ಪುಸ್ತಕವನ್ನು ಹೊಂದುವ ಈ ಯೋಜನೆಯ ಸದುಪಯೋಗ ಮಾಡಿಕೊಳ್ಳಿರಿ.

ಒಂದಾಣೆ ಮಾಲೆ, ಪ್ರಭಾತ ಆಫೀಸು, ರಥಬೀದಿ,
ಮಂಗಳೂರು-1.

ANNA. PUBLICATIONS, CAR STREET, MANGALORE-1.

ಬಲಿ ಬಂಧನ
(ಪೌರಾಣಿಕ ಏಕಾಂಕ ನಾಟಕ)

....

ಪಾತ್ರಗಳು: ಬಲಿ, ಬಲಿಯ ಪತ್ನಿ, ಶುಕ್ರಾಚಾರ್ಯ, ಅಮಾತ್ಯ, ಸೇನಾಪತಿ, ಚಾರಕರು, ಇಂದ್ರ, ಅಗ್ನಿ, ಯಮ, ವರುಣ, ಕಶ್ಯಪ, ಅದಿತಿ, ಶ್ರೀಹರಿ, ವಾಮನ, ನರ್ತಕಿಯರು, ಅಸುರರು, ಸುರರು, ಇತ್ಯಾದಿ.

ದೃಶ್ಯ ೧

(ಸ್ವರ್ಗಲೋಕ—ಅಮರಾವತಿಯಲ್ಲಿ ದೈತ್ಯಸಭೆ)

ಶುಕ್ರಾಚಾರ್ಯ: ದೈತ್ಯವೀರರೇ, ನಿಮ್ಮ ಮನೋರಥವು ಇಂದು ಕೈಗೂಡಿದಂತಾಯಿತು. ಬಲಿಯು ಗೆಯ್ದ ದಿಗ್ವಿಜಯದಿಂದ ಈ ಲೋಕವೇ ಏಕೆ, ಅಖಂಡ ವಿಶ್ವವೇ ಇಂದು ಅಸುರರ ಅಧೀನವಾದ ಮೇಲೆ, ನಿಮ್ಮ ಆಜನ್ಮ ಶತ್ರುಗಳಾದ ಆ ಸುರರಿಗೆ ಇನ್ನು ಸ್ಥಾನವೆಲ್ಲಿ? ಇಂದ್ರಾದಿ ದಿಕ್ಪತಿಗಳು ಎಲ್ಲೋ ಮಂದರಗಿರಿಯ ಕಂದರಗಳಲ್ಲ ಅಡಗಿ ಜೀವಿಸಬೇಕಷ್ಟೆ! ನಮ್ಮ ಕಣ್ಣಿಗೆ ಗೋಚರಿಸಿದರೆ ಅವರ ಪಾಡು........!

ಬಲಿ: ಆಚಾರ್ಯದೇವ, ಹೌದು, ಹೌದು, ಇಂದ್ರಾದಿಗಳ ಪಾಡು ಕಾಡು ಹಂದಿಗಳ ಪಾಡಲ್ಲದೆ ಮತ್ತೇನು? ಇನ್ನು ಮುಂದೆ ಈ ಸ್ವರ್ಗಲೋಕವು ಸುರರ ಕೈತಪ್ಪಿದ್ದು—ತಪ್ಪಿದ್ದೇ! ಗುರುದೇವ, ಎಲ್ಲಕ್ಕೂ ತಮ್ಮ ಅನುಗ್ರಹವೇ ಕಾರಣವಲ್ಲದೆ ಮತ್ತಾವುದು?

ಶುಕ್ರ: ದಾನವರೆ, ನಿಮ್ಮ ಅತುಲಸಾಹಸಕ್ಕೂ ಅಸದೃಶ ವಿನಯಕ್ಕೂ ಮೆಚ್ಚಿದೆನು. ಇಂದೀಗ ವಿಶ್ವವನ್ನೇ ಜಯಿಸಿ ಅಸುರರು ಸುರಲೋಕವನ್ನು ಏರಿದ ಮಹಾಶುಭದಿನ. ಈ ಶುಭದಿನದಂದು ಬಲಿಷ್ಠನಾದ ಬಲಿಯು ಇಂದ್ರಪೀಠವನ್ನೇರಲಿ! ಇನ್ನು ಮುಂದೆ ಬಲಿ, ಅಲ್ಲ ಬಲಿ ಚಕ್ರವರ್ತಿಯು ನಿಮ್ಮೆಲ್ಲರ ಹಾಗೂ ಮೂರು ಲೋಕದ ಒಡೆಯನೆಂದು ಸಾರಲ್ಪಡಲಿ! ಬಲಿಯೇ ಸ್ವರ್ಗವನ್ನಾಳಲು ಸಮರ್ಥನು; ಅವನೇ ಮುಂದೆ ಅಸುರ ಸಾರ್ವಭೌಮನು.

ಅಸುರರು: ಬಲಿ ಚಕ್ರವರ್ತಿಗೆ ಜಯವಾಗಲಿ! ಸ್ವರ್ಗಾಧಿಪತಿ ಅಸುರ ಸಾರ್ವಭೌಮನಿಗೆ ಜಯವಾಗಲಿ! (ಉದ್ಘೋಷಿಸುವರು.)

ಶುಕ್ರ: ಶಿಷ್ಯವರನಾದ ಬಲಿ, ಇದೋ ಶುಭಮುಹೂರ್ತವು ಕಾದಿದೆ. ಇಂದ್ರಪೀಠಾಧಿರೂಢನಾಗು! ಬಲಿಯೆಂಬ ನಿನ್ನ ಹೆಸರು ಅನ್ವರ್ಥವಾಗಿ ಅಷ್ಟ ದಿಗ್ಗಜಗಳ ದಂತಗಳಲ್ಲಿ ಕೆತ್ತಲ್ಪಡಲಿ!

ಬಲಿ: ಗುರುದೇವ, ಅಪ್ಪಣೆಯಂತೆ. ಎಲ್ಲವೂ ತಮ್ಮ ಅನುಗ್ರಹ! ಗುರುವಿನ ಅನುಗ್ರಹವೊಂದಿದ್ದರೆ ಆವುದೂ ಅಸಾಧ್ಯವೆಂದಿಲ್ಲ ದೇವ! (ಅಡಿಗಳಿಗೆ ಎರಗುವನು.)

ಶುಕ್ರ: (ಹಿಡಿದೆತ್ತಿ) ಶಿಷ್ಯೋತ್ತಮ! ಚಿರಂಜೀವಿಯಾಗಿ ಚಿರಕಾಲ ಸ್ವರ್ಗವನ್ನಾಳು! ಬಲಿ ಚಕ್ರವರ್ತಿಯೆಂಬ ಹೆಸರನ್ನು ಶಾಶ್ವತವನ್ನಾಗಿ ಮಾಡು! (ಕೈಹಿಡಿದು ಗದ್ದುಗೆಯನ್ನೇರಿಸುವನು. ಅಸುರರು ಛತ್ರಚಾಮರಗಳಿಂದ ಸೇವೆಸಲ್ಲಿಸುವರು. ನರ್ತಕಿಯರ ನರ್ತನವಾಗುವುದು.)

ಅಸುರರು: ಬಲಿಚಕ್ರವರ್ತಿಗೆ ಜಯವಾಗಲಿ! ಅಸುರಾಧಿಪನಿಗೆ ಜಯವಾಗಲಿ! ಸ್ವರ್ಗಾಧಿರಾಜನಿಗೆ ಜಯವಾಗಲಿ! (ಏಕಕಂಠದಿಂದ ಉದ್ಘೋಷಿಸುವರು.) (ತೆರೆ.)

ದೃಶ್ಯ ೨

(ಬಲಿ ಚಕ್ರವರ್ತಿಯ ಆಸ್ಥಾನ)

ಬಲಿ: ಅಸುರರ ಭಾಗ್ಯಾಂಬರದಲ್ಲಿ ಬೆಳ್ಳಿ ಮೂಡಿದ ದಿನವಿದು. ಇದುತನಕ ಸ್ಥಾನಮಾನಗಳಿಲ್ಲದೆ ಅಲೆದಾಡುತ್ತಿದ್ದ ಅಸುರರು ಇಂದು ಸರಿಯಾದ ಸ್ಥಾನಮಾನಗಳನ್ನು ಪಡೆದು ಸ್ವತಂತ್ರರಾದಂತಾಯಿತು, ಆ ಗುರುದೇವನ ಹಾಗೂ ಪ್ರಭುಪರಮೇಶ್ವರನ ದಯೆಯಿಂದ. ಇಂದೀಗ ನಾವು ಇಷ್ಟರಿಂದಲೇ ತೃಪ್ತರಾಗದೆ ಮುಂದಿನ ವ್ಯವಸ್ಥೆಯನ್ನು ಮಾಡಬೇಕಾಗಿದೆ. ಅಮಾತ್ಯವರ!

ಅಮಾತ್ಯ: ಪ್ರಭೋ, ಏನಪ್ಪಣೆ?

ಬಲಿ: ಇದೋ, ಸ್ವರ್ಗಲೋಕದಲ್ಲಿ ಹಾಗೂ ಇನ್ನಿತರ ಲೋಕಗಳಲ್ಲಿ ಕೂಡ ದೇವತೆಗಳನ್ನುದ್ದೇಶಿಸಿ ಯಜ್ಞಯಾಗಾದಿಗಳನ್ನು ಮಾಡದಂತೆ ಆಜ್ಞಾಪಿಸೋಣಾಗಲಿ! ಒಂದು ಪಕ್ಷ ಸುರಪಕ್ಷಪಾತಿಗಳಾಗಿ ಯಾರಾದರೂ

ಇಂದ್ರಾದಿಗಳನ್ನು ಕುರಿತು ಯಜ್ಞಾದಿಗಳನ್ನು ಮಾಡಿದರೆ, ಅವರ ಕಂಠಚ್ಛೇದಮಾಡಿಸಲಾದೀತೆಂದು ಪ್ರಕಟಿಸೋಣಾಗಲಿ!

ಅಮಾತ್ಯ: ಸಾರ್ವಭೌಮ! ಇಂದೇ ಚಾರಕರನ್ನು ಕಳುಹಿಸಿ ಡಂಗುರ ಸಾರಿಸುವೆನು. ಯಜ್ಞಯಾಗಾದಿಗಳು ದೇವತೆಗಳ ಹೆಸರಿನಲ್ಲಿ ನಡೆಯುವಿದ್ದರೆ ಆ ಅಮರರು ಆಹಾರವಿಲ್ಲದೆ ನರಳಿ ಸಾಯಬೇಕಾಗುವುದು. ಹಾಗಾಗಲೇ ಬೇಕು ಆ ಪಾಪಿಗಳಿಗೆ. ಇದು ಒಳ್ಳೆಯ ಆಲೋಚನೆ.

ಬಲಿ: ಸೇನಾಪತಿ, ಇನ್ನು ಮುಂದೆ ನಮ್ಮ ರಾಜ್ಯದಲ್ಲಿ ಪೂಜಿಸುವುದಿದ್ದರೆ ಯಾರನ್ನು ಪೂಜಿಸಬೇಕು, ತಿಳಿದಿದೆಯೆ?

ಸೇನಾಪತಿ: ಪ್ರಭುಗಳನ್ನಲ್ಲದೆ ಮತ್ತಾರನ್ನು?

ಬಲಿ: ಭಜಿಸುವುದಿದ್ದರೆ ಯಾರನ್ನು? ತಿಳಿದಿದೆಯೋ?

ಸೇನಾಪತಿ: ಭಕ್ತಾಭೀಷ್ಟಪ್ರದಾತರೆನಿಸಿದ ತಮ್ಮನ್ನಲ್ಲದೆ ಮತ್ತಾರನ್ನು ಭಜಿಸುವುದು?

ಬಲಿ: ಸರಿ. ಸರಿಯಾಗಿಯೇ ಹೇಳಿದೆ. ಯಾರಲ್ಲಿ ಚತುರ ಚಾರಕರು? ಈಗಲೇ ಈ ರೀತಿ ಆಜ್ಞಾಪಿಸಬೇಕಾಗಿದೆ.

ಚಾರಕರು: (ಪ್ರವೇಶಿಸಿ) ಅಸುರ ಸಾರ್ವಭೌಮರ ಪಾದಕ್ಕೆ ಬಿದ್ದಿದ್ದೇವೆ. ಏನಪ್ಪಣೆ? ಇಂದ್ರನನ್ನು ಹಿಡಿದು ತರಬೇಕೇ? ಅಗ್ನಿಯನ್ನು ಕಡಲಲ್ಲಿ ಅದ್ದಬೇಕೇ? ಏನಾಗಬೇಕು?

ಬಲಿ: ಚಾರಕರೆ, ಕಾಲಭೈರವನ ಕೋರೆಹಲ್ಲುಗಳನ್ನು ಕೀಳುವ ನಿಮ್ಮ ಅದಟಿನ ಮಾತನ್ನು ಕೇಳುವಾಗ ಉತ್ಸಾಹ ಉಕ್ಕಿಬರುತ್ತಿದೆ. ಈಗ ಅಂತಹ ಮಹಾಕಾರ್ಯದ ಅವಕಾಶವಿಲ್ಲ. ಮೂರು ಲೋಕಗಳಲ್ಲಿಯೂ ಯಜ್ಞ—ಯಾಗ, ಧ್ಯಾನ—ಆರಾಧನ, ಜಪ—ತಪ ಮೊದಲಾದುವುಗಳೆಲ್ಲವನ್ನೂ ಇಂದ್ರಾದಿ ದೇವತೆಗಳ ಹೆಸರಲ್ಲಿ ಮಾಡದೆ ದೈತ್ಯಸಾರ್ವಭೌಮನೆನಿಸಿದ ನನ್ನ, ಈ ಬಲಿಚಕ್ರವರ್ತಿಯ ಹೆಸರಲ್ಲಿ ಮಾಡುವಂತೆ ಆಜ್ಞಾಪಿಸೋಣಾಗಲಿ!

ಚಾರಕರು: ಪ್ರಭೋ, ಅಪ್ಪಣೆ! (ಹೊರಡಲನುವಾಗುವರು.)

ಬಲಿ: (ತಡೆದು) ನಿಲ್ಲಿರಿ, ಇನ್ನೂ ಇದೆ. ಕೇಳಿರಿ! ಇದು ಅಸುರ ಸಾರ್ವಭೌಮನೆನಿಸಿದ ಬಲಿಚಕ್ರವರ್ತಿಯ ಕಟ್ಟಪ್ಪಣೆ ಎಂದು ತಿಳಿಸೋಣಾಗಲಿ! ಆಜ್ಞೆಗೆ ತಪ್ಪಿದವರು ಶೂಲದ ತುದಿಯನ್ನು ಕಾಣಬೇಕಾಗುವು

ದೆಂಬುದನ್ನು ಪ್ರತಿಯೊಬ್ಬನೂ ತಿಳಿದಿರಲಿ! ಇದು ಬಲಿಚಕ್ರವರ್ತಿಯು ಬಲವತ್ತರನಾದ ಆಜ್ಞೆ! ಹೀಗೆ ಸಾರಿರಿ. ಈಗ ನಡೆಯಿರಿ!

ಚಾರಕರು: ಮಹಾಪ್ರಭೋ, ಮಹದಾಜ್ಞೆ!

ಬಲಿ: ಮಂತ್ರಿವರ, ಎಲ್ಲಿ ನಮ್ಮ ಗೂಢಚಾರರು? ಎಲ್ಲೆಲ್ಲಿ ಯಾರು ಯಾರು ನಮ್ಮ ಕುರಿತು, ನಮ್ಮ ವೈರಿಗಳಾದ ದೇವತೆಗಳ ಕುರಿತು ಏನೇನು ಮಾಡುತ್ತಿರುವರೆಂಬುದನ್ನು ರಹಸ್ಯವಾಗಿ ತಿಳಿದು ಆಗಾಗ ನಮಗೆ ತಿಳಿಸುತ್ತಿರುವಂತೆ ಆಜ್ಞಾಪಿಸಬೇಕು.

ಅಮಾತ್ಯ: ಅವಶ್ಯವಾಗಿ, ಸಾರ್ವಭೌಮ! ಸುರರು ಬಹು ಮಾಯಾವಿಗಳು, ಅವರು ಏನೂ ಮಾಡಬಲ್ಲರು. ಆದಕಾರಣ ನಾವಿಂದು ಮೈಮರೆತಿರದೆ ಜಾಗರೂಕರಾಗಿರಬೇಕೆಂಬುದು ನಿಜ. ಅಂತೆಯೇ ಆಜ್ಞಾಪಿಸುವೆನು.

ಬಲಿ: ಅಮಾತ್ಯರು, ಸೇನಾಪತಿಗಳು, ಅಸುರವೀರರು ಎಲ್ಲರೂ ಆಲಿಸಿ ಕೇಳಬೇಕು. ಇಂದಿನ ತನಕ ಸ್ವರ್ಗಲೋಕದ ಕಲ್ಪತರು, ಕಾಮಧೇನು ಚಿಂತಾಮಣಿಗಳು ಚಿಂತಿತಾರ್ಥಗಳನ್ನು ಕೊಡುವವುಗಳೆಂದು ಹೆಸರುಪಡೆದಿದ್ದರೆ, ಇನ್ನು ಮುಂದೆ ಬಲಿಚಕ್ರವರ್ತಿಯು ಕೊಡುಗೈತನದ ಮುಂದೆ ಅವು ನಾಚಬೇಕು. ನನ್ನನ್ನು ಆರಾಧಿಸುವ ನನ್ನ ಆಜ್ಞೆಯಂತೆ ನಡೆಯುವ ಯಾರಿಗೂ ಏನೂ ಕಡಿಮೆಯಿರಲಾರದೆಂದು ತಿಳಿಯಬೇಕು. ನಮ್ಮ ರಾಜ್ಯದಲ್ಲಿ ಆಗಬೇಕಾದ ಪುನರ್ವ್ಯವಸ್ಥೆಗಳೆಲ್ಲವನ್ನೂ ಶೀಘ್ರದಲ್ಲಿಯೇ ಮಾಡಬೇಕು. ಬಲಿಚಕ್ರವರ್ತಿಯು ರಾಜ್ಯವು ಆದರ್ಶ ರಾಜ್ಯವೆನಿಸಬೇಕು. ಎಲ್ಲರೂ ತಮ್ಮ ತಮ್ಮ ಅಧಿಕಾರಗಳನ್ನು ಜತನದಿಂದ ನಿರ್ವಹಿಸುತ್ತಿರಬೇಕು. ಇದು ಅಸುರೇಶ್ವರನ ಅಪೇಕ್ಷೆ. ಅಸುರರಿಗೆ ಶುಭವಾಗಲಿ! ಅಮರಲೋಕವು ಅಸುರರಿಗೆ ಸ್ಥಿರವಾಗಲಿ!

ಎಲ್ಲರೂ: ತಥಾಸ್ತು! ತಥಾಸ್ತು! (ತೆರೆ.)

ದೃಶ್ಯ ೩

(ಸ್ಥಾನಭ್ರಷ್ಟರಾದ ಇಂದ್ರಾದಿಗಳ ಗುಪ್ತ ಸಭೆ.)

ಇಂದ್ರ: (ಖಿನ್ನನಾಗಿ) ದೇವತೆಗಳಿರಾ, ಇದುತನಕ ಸ್ಥಾನಭ್ರಷ್ಟರಾದರೂ ಸುರರ ಆರಾಧಕರಾದ ಋಷಿಮುನಿಗಳು ಯಜ್ಞಯಾಗಾದಿಗಳನ್ನು

ಮಾಡುತ್ತಿದ್ದುದರಿಂದ ನಮ್ಮ ಹೊಟ್ಟೆಯಾದರೂ ತುಂಬುತ್ತಿತ್ತು. ಈಗೀಗ ಯಜ್ಞಯಾಗಾದಿಗಳ ಮೂಲಕ ನಮಗೆ ಬರುತ್ತಿದ್ದ ಹವಿರ್ಭಾಗಗಳೂ ಬರದಂತಾಗಿವೆ. ಆ ಖೂಳ ಬಲಿಯು ಅದನ್ನೂ ತಡೆದಿರಬೇಕೆಂದು ತೋರುತ್ತಿದೆ.

ಅಗ್ನಿ: ಹೌದು ದೇವೇಂದ್ರ, 'ಇಂದ್ರಾಯ ಸ್ವಾಹಾ, ಅಗ್ನಯೇ ಸ್ವಾಹಾ' ಹೀಗೆ ಹೋಮಿಸುವ ಬದಲು 'ಬಲಿ ಸಾರ್ವಭೌಮಾಯ ಸ್ವಾಹಾ, ಅಸುರೇಂದ್ರಾಯ ಸ್ವಾಹಾ' ಹೀಗೆ ಹೋಮಿಸಬೇಕೆಂದು ಆತನ ಕಟ್ಟಪ್ಪಣೆಯಾಗಿದೆಯೆಂದು ಋಚೀಕಾದಿ ಮುನಿಗಳು ರಹಸ್ಯವಾಗಿ ಆಡುತ್ತಿದ್ದುದನ್ನು ಕೇಳಿದ ನಮ್ಮವರಲ್ಲೋರ್ವನು ಈ ವಾರ್ತೆಯನ್ನು ಅರುಹಿದನು (ಭಯದಿಂದ ಸುತ್ತಲೂ ನೋಡಿಕೊಳ್ಳುವನು.)

ಯಮ: ದೇವರಾಜ, ಅಷ್ಟದಿಕ್ಪತಿಗಳೆನಿಸಿದ ನಮಗಾದ ಈ ಪಾಡನ್ನು ನೆನಸುವಾಗ ಬದುಕೇ ಬೇಡವೆನಿಸುತ್ತಿದೆ. ಸಕಲ ಪ್ರಾಣಿಕೋಟಿಗಳ ಪ್ರಾಣಾಪಹಾರಕವಾದ ಈ ಯಮದಂಡವಾದರೋ ಇಂದು ಕೇವಲ ಹಸ್ತಭೂಷಣಪ್ರಾಯವೆನಿದೆ. ಹಾ! ವಿಧಿಯೇ!

ವರುಣಾದಿಗಳು: ಹೌದು ಸುರಪಾಲ, ನಮ್ಮ ಆಯುಧಗಳ ಗತಿಯೂ ಅಷ್ಟೆ. ತಮ್ಮ ವಜ್ರಾಯುಧವೇ ಕುಂಠಿತವಾಗಿರುವುದೆನ್ನುವಾಗ ಮಿಕ್ಕುಳಿದ ಆಯುಧಗಳ ಪಾಡೇನು?

ಇಂದ್ರ: ಇಂದೀಗ ನಾವು ಹೀಗೆಯೇ ಗಿರಿ ಕಂದರಗಳಲ್ಲಿ ಅಡಗಿದ್ದು ಹೊಟ್ಟೆಗೂ ಆಹಾರವಿಲ್ಲದೆ ಎಷ್ಟು ಕಾಲ ಬಾಳಲಿ! ಆರಿಗೇ ಕಷ್ಟವನ್ನು ಡೂರಲಿ? ಈಶ್ವರನಲ್ಲಿ ದೂರಲೇ? ಅದಾಗದು. ಅವನು ಅಸುರರ ಆರಾಧ್ಯ ದೈವ. ಬ್ರಹ್ಮನು ಜಡನಾದುದರಿಂದ ಅವನಲ್ಲಿ ದೂರಿದರೂ ಪ್ರಯೋಜನ ದೊರಕದು. ಹಾಗಿದ್ದರೆ ಮತ್ಯಾರಿಂದ ಈ ದುರ್ಗತಿಯ ಪರಿಹಾರ? ಇದಕ್ಕೆ ಅವಸಾನವಿಲ್ಲವೇ? (ನಿಟ್ಟುಸಿರ್ಗರೆಯುವನು).

ದೇವತೆಗಳು: ದೇವರಾಜ, ಚಿಂತಿಸದಿರು. ಈ ಮೊದಲು ದೇವತೆಗಳಿಗೆ ಕಷ್ಟಬಂದಾಗ ಕೈಗೊಟ್ಟು ಕಾಪಾಡಿದ ಹರಿಯೇ ಹರಿಗೋಲಾಗಿ ಇಂದೀ ಕಷ್ಟದ ಕಡಲನ್ನು ದಾಟಿಸದಿರಲಾರನು. ಆದ್ದರಿಂದ ಇಂದೇ ನಾವ

ಲ್ಲರೂ ಶ್ರೀಮನ್ನಾರಾಯಣನ ದಿವ್ಯದರ್ಶನಕ್ಕಾಗಿ ಕ್ಷೀರಸಾಗರದ ತಡಿಗೆ ಧಾವಿಸೋಣ!

ಇಂದ್ರ: ಒಳ್ಳೆಯ ಸೂಚನೆ. ಒಬ್ಬನಿಗಿಂತ ಇಬ್ಬರ ಅಥವಾ ಹೆಚ್ಚು ಮಂದಿಯ ಆಲೋಚನೆ-ಸೂಚನೆಗಳು ಲೇಸೆನ್ನುವುದು ಇದಕ್ಕೇ. ನನಗೆ ಯಾವ ಉಪಾಯವೂ ಹೊಳೆಯದಿರಲು, ನಿಮಗೆ ತೋರಿದ ಉಪಾಯ ಸರಿಯಾದುದು. ಹಾಗೆಯೇ ಆಗಲಿ. ಇಂದೇ ಹೊರಡೋಣ.

ಎಲ್ಲರೂ: ಶ್ರೀಮನ್ನಾರಾಯಣ ಗೋವಿಂದ! ಗೋವಿಂದ! ಗೋವಿಂದ! (ನಿರ್ಗಮನ). (ತೆರೆ).

ದೃಶ್ಯ ೪

(ಕ್ಷೀರಸಾಗರದ ತೀರದಲ್ಲಿ ದೇವತೆಗಳು ಸ್ತುತಿಮಾಡುತ್ತಿರುವರು.)

ದೇವತೆಗಳು: ಜಯ ಜಯ ಕ್ಷೀರಾಂಬುಧಿಶಯನ
ಜಯ ಜಯ ನೀಲಾಂಬುಜನಯನ ॥ ಪ ॥
ಮತ್ಸ್ಯರೂಪದಿ ವೇದಗಳನು ತಂದೆ
ಕಚ್ಛಪರೂಪದಿ ಗಿರಿಯನೆತ್ತಿ ನಿಂದೆ ॥ ೧ ॥
ಸೂಕರ ರೂಪದಿ ಹಿರಣ್ಯಾಕನನು ಕೊಂದೆ
ನರಹರಿ ರೂಪದಿ ಕಂಬದಿಂದಲಿ ಬಂದೆ ॥ ೨ ॥
ನಿನ್ನಯ ನುತಿಪೆವು ಪರಿಪರಿಯಿಂದೆ
ಬಲಿಯನು ತುಳಿಯುತ ಸಲಹೌ ತಂದೆ ॥ ೩ ॥
ಜಯ ಜಯ ಜಯ ಜಯ ಶ್ರೀಶ ಹರೇ
ಜಯ ಜಯ ಜಯ ಜಗದೀಶ ಹರೇ ॥
(ಪ್ರಾರ್ಥಿಸುವರು)

ಶ್ರೀಹರಿ: (ವೈದೋರಿ) ಭಕ್ತರಾದ ದೇವತೆಗಳೇ, ಎದ್ದೇಳಿರಿ! ನಿಮ್ಮ ಎದೆಯಳಲನ್ನರಿತೆ. ಬಲಿಚಕ್ರವರ್ತಿಯು ನಿಮ್ಮಂತೆಯೇ ಭಕ್ತನಾದುದರಿಂದ ಆತನನ್ನು ನಾನು ಒಮ್ಮೆಯೇ ನಿಗ್ರಹಿಸಲಾರೆ.

ಇಂದ್ರ: ದೇವಾ, ಹಾಗಾದರೆ ಇದು ತನಕ ಪೊರೆದ ಕೈ ಈಗ ತೊರೆವುದು ಉಚಿತವೇ?

ಶ್ರೀಹರಿ: ಇಲ್ಲ ದೇವೇಂದ್ರ, ಹಾಗೆ ಭಾವಿಸದಿರು. ಆದರೆ, ಉಪಾಯದಿಂದ ಮಾತ್ರ ಆ ಬಲಿಯನ್ನು ಗೆಲ್ಲಬೇಕಾಗಿದೆ

ಇಂದ್ರ: ಹಾಗಿದ್ದರೆ, ಅವುದಾದರೊಂದು ಉಪಾಯವನ್ನು ಯೋಚಿಸೋಣಾಗಲಿ ದೇವಾ!

ಶ್ರೀಹರಿ: ಅದು ಮೊದಲೇ ಯೋಚಿಸಲ್ಪಟ್ಟಿದೆ. ಬಲಿಯು ಮಹಾದಾನಿಯೆಂದು ಕೇಳಿಬರುತ್ತಿರುವುದು. ಆತನ ಬಳಿಗೆ ಹೋಗಿ ಮೂರಡಿ ನೆಲವನ್ನು ಯಾಚಿಸಿ, ಒಂದಡಿಯಿಂದ ಭೂಲೋಕವನ್ನೂ ಇನ್ನೊಂದಡಿಯಿಂದ ಸ್ವರ್ಗಲೋಕವನ್ನೂ ಅಳೆದು ಮತ್ತೊಂದಡಿಯಿಂದ—ಅಡಿದ ನುಡಿಗೆ ತಪ್ಪದ ಆತನನ್ನೆ ಮೆಟ್ಟಿ ಪಾತಾಳಕ್ಕಿಳಿಸುವೆನು. . ನಿರ್ಭಯರಾಗಿರಿ.

ಅಗ್ನಿ: ದೇವಾ. ಇದೇ ರೂಪದಿಂದ ಈ ಕಾರ್ಯ ಸಾಧಿಸಲು ಸಾಧ್ಯವೆ?

ಶ್ರೀಹರಿ: ವೈಶ್ವಾನರ, ಆದಕ್ಕಾಗಿ ಹೊಸ ಅವತಾರವೊಂದನ್ನೆತ್ತುವೆನು. ಹಿಂದೆ ತಮನು ವೇದವನ್ನೊಯ್ದಾಗ ವೇದಗಳನ್ನುದ್ಧರಿಸಲು ಮತ್ಸ್ಯಾವತಾರವೆತ್ತಿದೆ. ದೇವತೆಗಳಿಗೆ ಅಮೃತವನ್ನೀಯಲು ಮಂದರ ಪರ್ವತವನ್ನೆತ್ತಲು ಕೂರ್ಮರೂಪ ತಾಳಿದೆ. ಹಿರಣ್ಯಾಕ್ಷನನ್ನು ಹತಮಾಡಿ ಧರೆಯನ್ನುದ್ಧರಿಸಲು ವರಾಹಾವತಾರವೆತ್ತಿದೆ. ಹಿರಣ್ಯಕಶಿಪುವನ್ನು ವಧಿಸಿ ಭಕ್ತ ಪ್ರಹ್ಲಾದನನ್ನು ಕಾಯಲು ನರಹರಿಯಾಗಿ ಕಂಬದಿಂದುದಿಸಿ ಬಂದೆ. ಹಾಗೆಯೇ ಈ ಬಲಿಯನ್ನು ನಿಗ್ರಹಿಸಲು ಅದಿತಿ ಕಶ್ಯಪರಿಗೆ ವಾಮನನೆಂಬ ಹೆಸರಿನಿಂದ ಮಗನಾಗಿ ಜನಿಸುವೆನು. ಬಾಲಬ್ರಹ್ಮಚಾರಿಯಾದ ನಾನು ಬಲಿಯ ಬಳಿ ಹೋಗಿ ಮೂರಡಿ ನೆಲವನ್ನು ದಾನವಾಗಿ ಬೇಡಿ, ಅವನನ್ನು ನಿಗ್ರಹಿಸುವೆನು.

ಇಂದ್ರ: ಪ್ರಭೋ ಶ್ರೀಹರಿ, ಶೀಘ್ರದಲ್ಲಿ ನಮ್ಮ ದುಃಖದ ಪರಿಹಾರವಾಗಲಿ! ಪ್ರಭೊ, ಸದಾ ಪ್ರಸನ್ನನಾಗಿಯೇ ಇರಬೇಕೆಂದು ಬೇಡುತ್ತಿರುವೆನು. (ವಂದಿಸುವರು.)

ಶ್ರೀಹರಿ: ತಥಾಸ್ತು! ಮಂಗಳಮಸ್ತು! (ಅದೃಶ್ಯನಾಗುವನು)

(ತೆರೆ.)

ದೃಶ್ಯ ೫

(ಅದಿತಿ—ಕಶ್ಯಪರ ಆಶ್ರಮ.)

ಕಶ್ಯಪ: ಅದಿತಿ, ನಮ್ಮ ಬಾಲಕನು ಸಾಮಾನ್ಯ ಮಾನವ ಶಿಶುವೆಂದು ಭಾವಿಸಿರುವೆಯಾ?

ಅದಿತಿ: ಪತಿದೇವ, ಇವನ ಬಾಲಲೀಲೆಯನ್ನು ಕಾಣುವಾಗಲೇ ಅವತಾರಪುರುಷನೆಂದು ಭಾಸವಾಗುತ್ತಿರುವುದು.

ಕಶ್ಯಪ: ಇರಲಿ, ಇವನಿಗೀಗ ಏನೆಂದು ನಾಮಕರಣಮಾಡಬೇಕೆಂದು ಯೋಚಿಸಿರುವೆ?

ಅದಿತಿ: ನೋಡಲು ಈತನು ವಾಮನಮೂರ್ತಿಯಾಗಿ ಕಾಣುತ್ತಿರುವುದರಿಂದ ವಾಮನನೆಂಬ ಅನ್ವರ್ಥ ನಾಮದಿಂದಲೇ ಈತನನ್ನು ಕರೆಯೋಣ.

ಕಶ್ಯಪ: ಸತಿಯ ಇಚ್ಛೆಗೆ ವಿರೋಧವಾಗಿ ಪತಿಯ ಇಚ್ಛೆಯೆಂಬುದಿದೆಯೇ? ಹಾಗಾದರೆ ವಾಮನನೆಂದೇ ನಾಮಕರಣಮಾಡೋಣ, ಬಾಲಕನನ್ನಿತ್ತ ಕೊಡು.

ಅದಿತಿ: (ಬಾಲಕನನ್ನು ಕಶ್ಯಪನ ಕೈಗೀಯುವಳು.) ಮಗೂ, ಅದೋ ಅಪ್ಪನು ಕರೆಯುತ್ತಿರುವುದು.

ವಾಮನ: ಅಪ್ಪಾ, ಎತ್ತಿಕೊಳ್ಳು.

ಕಶ್ಯಪ: (ಎತ್ತಿಕೊಂಡು) ಮಗೂ, ನೀನು ವಾಮನನೆಂಬ ಅನ್ವರ್ಥ ನಾಮಧೇಯದಿಂದ ಚಿರಂಜೀವಿಯಾಗು. ನಿನ್ನ ಅಮ್ಮ ಸೂಚಿಸಿದ ಹೆಸರಿದು.

ಅದಿತಿ: ನಾನು ಸೂಚಿಸಿದುದು, ನೀವು ಅನುಮೋದಿಸಿದುದು. ಹಾಗಾದರೆ, ವಾಮನನೆಂದೇ ಇನ್ನು ಮುಂದೆ ಕರೆಯೋಣ.

ಕಶ್ಯಪ: ಹಾಗೆಯೇ ಆಗಲಿ. ವಾಮನ, ವಾಮನ.

(ಅದಿತಿ ಕಶ್ಯಪರಿಬ್ಬರೂ ಕರೆದೆತ್ತಿಕೊಳ್ಳುವರು.)

ಅದಿತಿ: ಬಾಲಕನು ಶುಕ್ಲಪಕ್ಷದ ಚಂದಿರನಂತೆ ದಿನದಿಂದ ದಿನಕ್ಕೆ ವರ್ಧಿಸುವುದರೊಡನೆ ನಮ್ಮ ಆನಂದನನ್ನೂ ವರ್ಧಿಸುತ್ತಿರುವನು. ಈಗ ಉಪನಯನಸಂಸ್ಕಾರಕ್ಕೆ ಪ್ರಾಪ್ತವಯಸ್ಕನಾದನು.

ಕಶ್ಯಪ: ಮೊನ್ನೆ ಮೊನ್ನೆಯ ಬಾಲಕ. ಬಳೆದೇ ಬಿಟ್ಟ—ಎಷ್ಟು ಬೇಗ! ಆಗಲಿ. ಶುಭಮುಹೂರ್ತವನ್ನು ನೋಡಿ ಉಪನಯನವೆಸಗೋಣ! (ತೆರೆ.)

ದೃಶ್ಯ ೬

(ಕಶ್ಯಪಾಶ್ರಮ—ವಾಮನನು ಕೃತೋಪನಯನನಾಗಿರುವನು.)

ಕಶ್ಯಪ: ವಾಮನ, ನೀನೀಗ ಮೊದಲಿನಂತಲ್ಲ. ಕೃತೋಪನಯನನಾಗಿರುವಿ. ವೇದಾಭ್ಯಾಸ ಮಾಡುತ್ತ ನಮ್ಮ ಕುಲದೀಪಕನಾಗಿ ಬಾಳು!

ವಾಮನ: ಹಿರಿಯರ ಆಶೀರ್ವಾದ, ಗುರುಗಳ ಹಿತೋಪದೇಶ ಇವುಗಳೇ ಕಿರಿಯರ ಏಳಿಗೆಗೆ ಕಾರಣವಲ್ಲವೇ? ತಮ್ಮ ಆಶೀರ್ವಾದ ಬಲದಿಂದ ಲೋಕಸೇವಾನಿರತನಾಗಬೇಕೆಂಬ ಹೆಬ್ಬಯಕೆಯಿದೆ.

ಕಶ್ಯಪ: ಏನದು? ಈ ಎಳೆಹರೆಯದಲ್ಲೆ ಇದೆಂತಹ ಹುಚ್ಚು!

ವಾಮನ: ಪಿತೃದೇವ, ಬಲಿಯು ಬಂಧನಗೈದು, ಅವನಿಂದ ಪೀಡಿತರಾಗಿರುವ ಇಂದ್ರಾದಿ ದೇವತೆಗಳನ್ನು ಉದ್ಧರಿಸಲಿಕ್ಕಾಗಿ ಜನಿಸಿದವನು ನಾನೆಂಬುದನ್ನು ತಿಳಿಯಿರಿ.

ಕಶ್ಯಪ: ಧನ್ಯೋಽಸ್ಮಿ, ಧನ್ಯೋಽಸ್ಮಿ! ಅದಿತಿ, ಜಗತ್ಕರ್ತಾರನ ಜನನಿಯಾದ ನೀನೂ ಧನ್ಯೆ, ಧನ್ಯೆ!

ಅದಿತಿ: (ವಾಮನನನ್ನಪ್ಪಿಕೊಂಡು) ಮಗು, ವಾಮನ, ಚತುರ್ದಶ ಭುವನಗಳನ್ನು ಉದರದಲ್ಲಿಟ್ಟ ನಿನ್ನನ್ನು ಈ ನನ್ನ ಕಿರುಹೊಟ್ಟೆಯಲ್ಲಿ ಹೊತ್ತ ನಾನಲ್ಲವೇ ಧನ್ಯಳು!

ವಾಮನ: ಮಾತೆ, ಲೋಕೋಪಕಾರಕ್ಕಾಗಿ ಯಾವ ಕಾರ್ಯವನ್ನಾದರೂ ಮಾಡಬೇಕಾಗುತ್ತದೆ. ಅಂತೆಯೇ ನನ್ನ ಸಕಲ ಸುಖಭೋಗಗಳನ್ನು ತ್ಯಜಿಸಿ, ಋಷಿದಂಪತಿಗಳಾದ ನಿಮಗೆ ಬಾಲಕನಾಗಿ ಜನಿಸಬೇಕಾಯಿತು. ಇಂದೀಗ ನನ್ನ ಮುಂದಿನ ಕಾರ್ಯವಾಗಬೇಕಾಗಿದೆ. ಇನ್ನು ಹೆಚ್ಚು ಕಾಲಹರಣಮಾಡುತ್ತಿರಲು ಸಾಧ್ಯವಿಲ್ಲ. ಇಲ್ಲಿಂದ ಬಲಿಯ ಪುರಕ್ಕೆ ಹೋಗಬೇಕಾಗಿದೆ. ಮಾತಾಪಿತರು ಅಪ್ಪಣೆಕೊಡಬೇಕು; ಆಶೀರ್ವದಿಸಬೇಕು. (ಎರಗುವನು.)

ಆದಿತಿ-ಕಶ್ಯಪರು: (ಹಿಡಿದೆತ್ತಿ) ಲೋಕದೃಷ್ಟಿಯಿಂದ ನಮ್ಮ ಕುಮಾರನಾದುದರಿಂದ ನಿನ್ನನ್ನು ಹಿಡಿದೆತ್ತಿ ಆಶೀರ್ವದಿಸಿರುವೆವು. ನಿನ್ನ ಮನೋರಥವು ಸಿದ್ಧಿಸಲಿ! ದೇವಕಾರ್ಯವು ಕೈಗೂಡಲಿ! ನಿರ್ವಿಘ್ನಮಸ್ತು!

(ಆಶೀರ್ವದಿಸುವರು. ವಾಮನನು ದಂಡಕಮಂಡಲಚಕ್ರಧಾರಿಯಾಗಿ ಬಲಿಯ ಭವನಕ್ಕೆ ತೆರಳುವನು.) (ತೆರೆ.)

ದೃಶ್ಯ ೭

(ಬಲಿಯ ಭವನ—ಬಲಿಚಕ್ರವರ್ತಿಯು ದಾನದೀಕ್ಷಿತನಾಗಿದ್ದು, ಬಂದ ಬಂದವರಿಗೆ ಕೇಳಿದುದನ್ನೆಲ್ಲ ಕೊಡುವ ಸಡಗರದಲ್ಲಿ ಮೈಮರೆತಿರುವನು.)

ಬಲಿ: ಎಲ್ಲರೂ ಆಲಿಸಿ ಕೇಳಬೇಕು. ಆರಿಗೆ ಆವುದರಲ್ಲಿ ಅಪೇಕ್ಷೆಯಿದೆಯೋ ಅದನ್ನು ನಿಸ್ಸಂಕೋಚವಾಗಿ ಕೇಳಿ ಪಡೆಕೊಂಡು ಈ ಬಲಿಯ ಜನ್ಮಸಾರ್ಥಕ್ಯಗೊಳಿಸಬೇಕು. ಬನ್ನಿರಿ, ಸಂಕೋಚವಿಲ್ಲದೆ ಕೇಳಿರಿ!

ಶುಕ್ರ: ಬಲಿಸಾರ್ವಭೌಮಾ, ಹಿಂದೆ ಮೈಮರೆತು ಆಡಿ ಹಲವರು ಸೋತಿರುವರು. ಆದುದರಿಂದ ಮನಸ್ಸಿನಲ್ಲಿದ್ದರೂ ಬಾಯಲ್ಲಿ ಆಡದಿರು. ಆಡದೆಯೆ ನೀಡುವುದು ರೂಢಿಯಲ್ಲಿ ಉತ್ತಮರ ಲಕ್ಷಣವು.

ಬಲಿ: ಗುರುದೇವ, ದಾನವಿತ್ತು ಧನ್ಯನಾಗಬೇಕೆಂದಾಡಿದೆನಲ್ಲದೆ ಗರ್ವದಿಂದಲ್ಲ.

ಶುಕ್ರ: ಆಗಲಿ! ಸಾಗಲಿ ನಿನ್ನ ದಾನ!

(ವಾಮನನ ಪ್ರವೇಶ.)

ವಾಮನ: (ಪ್ರವೇಶಿಸಿ) ಭಿಕ್ಷಾಂ ದದಾತು ಬ್ರಹ್ಮಚಾರಿಣೆ.

ಬಲಿ: (ಆಲಿಸಿ, ನೋಡಿ) ತೇಜಸ್ವಿಯಾದ ಆರೋ ಓರ್ವ ವಟುವಿನಾಗಮನವಾಗುತ್ತಿದೆ. (ಎದ್ದು ವಾಮನನನ್ನು ಕರೆತಂದು ಉಚಿತಾಸನದಲ್ಲಿ ಕುಳ್ಳಿರಿಸಿ) ಬ್ರಹ್ಮಚಾರಿನ್, ಯಾವ ಅಪೇಕ್ಷೆಯಿದೆಯೋ ಅದನ್ನು ನಿಸ್ಸಂಕೋಚವಾಗಿ ನಿವೇದಿಸೋಣಾಗಲಿ! ಧನಕನಕ ಬೇಕೆ? ಊರು ಗ್ರಾಮಗಳು ಬೇಕೆ? ಯಾವುದು ಬೇಕು?

ವಾಮನ: ಅಸುರೇಂದ್ರ, ಬ್ರಹ್ಮಚಾರಿಯಾದ ನನಗೆ ಧನಕನಕ ಯಾವುದರಲ್ಲೂ ಅಪೇಕ್ಷೆಯಿಲ್ಲ. ಜಪಾದಿ ನಿತ್ಯಾನುಷ್ಠಾನಕ್ಕೆ ಕುಳಿತುಕೊಳ್ಳಲು ಒಂದು ಮೂರಡಿ ಸ್ವತಂತ್ರವಾದ ನೆಲ ಮಾತ್ರ ಬೇಕಾಗಿದೆ. ಅಷ್ಟನ್ನಿತ್ತರೆ ಸಾಕು.

ಬಲಿ: ಬ್ರಹ್ಮಚಾರಿನ್, ಈ ಮೂರಡಿ ನೆಲವನ್ನು ಯಾಚಿಸಲು ಇಷ್ಟು ಸಂಕೋಚವೇ? ಮೂರು ಲೋಕಗಳ ಅಧಿಪತಿಯಾದ ಬಲಿಯು ಮೂರಡಿ ನೆಲವನ್ನು ದಾನವೀಯುವುದೆಂದರೆ ನನ್ನ ಔದಾರ್ಯಕ್ಕಿದೊಂದು ಕೊರತೆಯೆನಿಸುವುದಲ್ಲವೆ?

ಶುಕ್ರ: (ವಾಮನನನ್ನು ನೋಡಿ ಸಂಶಯಪಟ್ಟು) ಬಲಿ, ಮೊದಲೇ ಹೇಳಿರುವೆನು ಮೈಮರೆತು ಮೋಸಹೋಗದಿರೆಂದು. ಸಾರಿ ಹೇಳುವೆನು, ಮೋಸಹೋಗದಿರು.

ವಾಮನ: ದೈತ್ಯರಾಜ, ಬೇಡ, ನನಗೆ ಮೂರಡಿಗಿಂತ ಹೆಚ್ಚು ನೆಲ ಬೇಡ. ಅಗತ್ಯಕ್ಕಿಂತ ಹೆಚ್ಚು ಭೂಮಿಯನ್ನು ಸ್ವಾಧೀನದಲ್ಲಿರಿಸಿಕೊಂಡು ತಾನೂ ಅನುಭವಿಸದೆ ಅನ್ಯರಿಗೂ ಅನುಭವಿಸಲೀಯದಂತೆ ವರ್ತಿಸುವ ರಾಕ್ಷಸೀ ವೃತ್ತಿಯವನು ನಾನಲ್ಲ. ನನಗೆ ಮೂರೇ ಅಡಿ ನೆಲ ಸಾಕು!

ಬಲಿ: ವಟುಮಹಾಶಯ, ಇದೋ ಮೂರಡಿಯಾದರೆ ಮೂರಡಿ. ಅಷ್ಟನ್ನಾದರೂ ಕೊಟ್ಟು ಜನ್ಮಸಾರ್ಥಕಗೊಳಿಸುವೆನು. ಸತ್ಪಾತ್ರರು ದೊರಕುವುದೇ ಕಷ್ಟ. ಅಂಥಲ್ಲಿ ತಾವಾಗಿ ಅವರು ಬಂದಾಗ ಕೊಡದೆ ಬಿಡುವುದೇ? (ನೆಲವನ್ನು ಧಾರೆಯೆರೆದೀಯಲು ಉದ್ಯುಕ್ತನಾಗುವನು.)

ಶುಕ್ರ: ಬಲಿ, ಏನಿದು? ಗುರುವಿನ ಮಾತನ್ನು ಮೀರುವಷ್ಟು ಗರ್ವ ವುಂಟಾಯಿತೆ? ಇದು ನಿನ್ನ ಕಡೆಗಾಲಕ್ಕೆ ತೋರಿದ ಕೆಡುವ ಬುದ್ಧಿ. ಕೊಡದಿರು ಧಾರೆಯೆರೆದು—ಮೂರಡಿಯೆಂದು ಮೂರು ಲೋಕಗಳನ್ನೆ ಅಳೆಯಬಲ್ಲ ಕಪಟಿಯೀತನು. ಸುರಪಕ್ಷಪಾತಿಯಾಗಿ ನಿನ್ನನ್ನು ವಂಚಿಸಲು ಬಂದಿರುವನು! ಈಯದಿರು ಈತನಿಗೆ! ಇತ್ತರೆ ಖಂಡಿತ ಕೆಟ್ಟುಹೋಗುವಿ! (ತಡೆಯುವನು)

ಬಲಿ: ಆಚಾರ್ಯದೇವ, ದಾನವೀಯುವ ಸಮಯದಲ್ಲಿ ತಡೆಯುವುದು ಗುರುಧರ್ಮವೆ? ಸತ್ಪಾತ್ರರೇ ಲಭಿಸುವುದು ದುರ್ಲಭ; ಅಂಥವರು ತಾವಾಗಿ ಬಂದಾಗ ದಾನವೀಯುವಂತೆ ಪ್ರೋತ್ಸಾಹಿಸುವುದನ್ನು ಬಿಟ್ಟು, ಕೊಡುವವರನ್ನು ತಡೆಯುವುದೆಂದರೆ ಇದಾವ ನ್ಯಾಯ? ಮನೆಯ ಬಾಗಿಲಿಗೆ ಬಂದ ಮಂದಾಕಿನಿಯಲ್ಲಿ ಮುಳುಗಿ ಮೀಯದವನು ಮಹಾಪಾತಕಿಯಲ್ಲವೆ? ಗುರುದೇವ, ಮನ್ನಿಸಿರಿ; ಎದುರಾಡಿದೆನೆಂದು ಎಣಿಸದೆ ದಾನವೀಯಲು ಅನುಮತಿಯಿತ್ತು ಶಿಷ್ಯನನ್ನುದ್ಧರಿಸಬೇಕು. (ಕೈಜೋಡಿಸಿ ಬೇಡುವನು)

ಶುಕ್ರ: (ಸಿಟ್ಟಿನಿಂದ) ಬಲಿ, ಬಹಳ ಮಾತಾಡಿದೆ! ನಿನ್ನಲ್ಲಿ ಸಲುಗೆ ತೋರಿಸಿದುದಕ್ಕೆ ನಿನ್ನಿಂದ ಈ ಮಾತು ಕೇಳಬೇಕಾಯಿತು. ಬಾಯಿಗಿಂತ ದೊಡ್ಡ ಹಲ್ಲಾದರೆ ಅದನ್ನು ಕಿತ್ತೆಸೆಯಬೇಕು. ಇದೋ, ಗುರುವಚನ

ವನ್ನು ಉಲ್ಲಂಘಿಸಿದ ನಿನಗೆ ತಕ್ಕ ಶಾಸ್ತಿಯಾಗದಿರದು. ಇಗೋ, ಈಗಲೇ ನಿನ್ನ ಆಸ್ಥಾನವನ್ನು ಬಿಟ್ಟು ಹೊರಟೆ! (ಗುಡುಗುಡಿಸಿ ಹೊರಟು ಹೋಗುವನು.)

ಬಲಿ: ತೊಲಗಿತು ವಿಘ್ನ, ತೊಲಗಿತು! ಇನ್ನಾದರೂ ವಿಳಂಬವೇಕೆ? ಮಡದಿಯನ್ನು ಕರೆದು ನಾವೀರ್ವರೂ ಈ ಮಹಾವಟುವಿಗೆ ಮೂರಡಿ ನೆಲವನ್ನಿತ್ತು ಪುನೀತರಾಗುವೆವು. ಕ್ಷಮಿಸಿರಿ, ಈಗ ಬಂದೆ! (ತೆರಳುವನು).

(ತೆರೆ)

ದೃಶ್ಯ ೮

ಶುಕ್ರ: (ಸ್ವಗತ) ಇಂದೀಗ ಬಲಿಯು ನನ್ನ ಮಾತನ್ನು ಮೀರಿ ನಿಶ್ಚಯವಾಗಿಯೂ ಕೆಡದೆ ಇರನು. ಹೇಗಾದರೂ ನನ್ನ ಶಿಷ್ಯನಲ್ಲವೆ? ಆತನು ಅವಿವೇಕದಿಂದ ವರ್ತಿಸಿದರೂ ನನಗೆ ವಿವೇಕ ಕೆಟ್ಟಿಲ್ಲವಷ್ಟೆ? ಈಗ ಹೇಗಾದರೂ ಈ ಬಲಿಯನ್ನು ರಕ್ಷಿಸಬೇಕು ಆದ ಕಾರಣ ಒಂದು ನೊಣದ ರೂಪವನ್ನು ಧರಿಸಿ ಬಲಿಯು ಧಾರೆಯೆರೆಯುವ ನೀರಗಿಂಡಿಯ ಕೊಂಬಿಗೆ ಅಡ್ಡವಾಗಿ ಕುಳಿತು ಧಾರಾಜಲ ಸುರಿಯದಂತೆ ಮಾಡಿ ಬಲಿಯನ್ನು ಬದುಕಿಸುವೆನು (ತೆರಳುವನು).

ಬಲಿ: (ಮಡದಿಯೊಂದಿಗೆ ಆಸ್ಥಾನವನ್ನು ಪ್ರವೇಶಿಸಿ) ಬ್ರಹ್ಮಚಾರಿನ್! ಇದೋ ಧಾರೆಯೆರೆವೆನು. ಪ್ರತಿಗ್ರಹಿಸೋಣಾಗಲಿ! (ಮಡದಿಯು ಧಾರೆಯೆರೆವಳು. ಕೊಂಬಿನಿಂದ ನೀರಿಳಿಯದಿರಲು) ಏನಿದು, ನೀರು ಸುರಿಯುವುದಿಲ್ಲ, ಸರಿಯಾಗಿ ಬಗ್ಗಿಸು! (ಮತ್ತೂ ಸುರಿಯದಿರಲು) ಗಿಂಡಿಯ ಕೊಂಬಿನೊಳಗೇನೋ ಕಸ ಸಿಲುಕಿರಬೇಕು (ಎಂದು ಕೈಯ ದರ್ಭೆಯ ಕುಚ್ಚನ್ನು ಕೊಂಬಿನೊಳಕ್ಕೆ ತಳ್ಳಲು, ಅದು ಶುಕ್ರಾಚಾರ್ಯನ ಒಂದು ಕಣ್ಣಿಗೆ ತಾಗಿ ಕಣ್ಣು ಕುರುಡಾಗುವುದು. ನೀರು ಧಾರಾಕಾರವಾಗಿ ಸುರಿಯುವುದು.)

ಬಲಿ: ಧನ್ಯೋಽಸ್ಮಿ! ಧನ್ಯೋಽಸ್ಮಿ! ಬ್ರಹ್ಮಚಾರಿನ್, ನೆಲವನ್ನು ಧಾರೆಯೆರೆದಿತ್ತೆ; ಅಡಿಯಿಂದ ಅಳೆಯೋಣಾಗಲಿ! (ಹಿಗ್ಗಿ ನಿಲ್ಲುವನು).

ವಾಮನ: ಇದೋ, ಅಳೆಯುವುದನ್ನು ನೋಡುತ್ತಿರು (ಎಂದು ವಿರಾಟರೂಪ ಧರಿಸುವನು. ಬಲಿಯು ಆಶ್ಚರ್ಯಭಯಚಕಿತನಾಗಿ ಸ್ತಂಭೀಭೂತನಾಗುವನು.)

ಶುಕ್ರ: (ಒಂದು ಕಣ್ಣಿಗೆ ಕೈಹಿಡಿದು ಪ್ರವೇಶಿಸಿ) ಬಲಿ, ಈಗಲಾದರೂ ತಿಳಿಯಿತೆ? ಇನ್ನಾದರೂ ನಾನೆಂದಂತೆ ಕೇಳಿದರೆ ಉಳಿಯಬಹುದು. ನೆಲ ವನ್ನು ಕೊಡದಿರು. ಕೊಟ್ಟು ಕೆಡದಿರು.

ಬಲಿ: ಗುರುದೇವ! ನನ್ನನ್ನು ತಡೆಯದಿರಿ. ಕೊಟ್ಟ ಮಾತಿಗೆ ತಪ್ಪುವಷ್ಟು ನೀಚನಲ್ಲ ಈ ಬಲಿಯು. ಸೂರ್ಯನು ತಂಪಾದರೂ ಚಂದ್ರನು ಬಿಸಿಯಾದರೂ ಬಲಿಯ ಮಾತು ಹುಸಿಯಾಗದು. 'ಅಳಿವುದು ಕಾಯ, ಉಳಿವುದು ಕೀರ್ತಿ.'

ವಾಮನ: ಏನು ದೈತ್ಯೇಂದ್ರ? ಅಳೆಯಲೇ?

ಬಲಿ: ಸ್ವಾಮಿ, ಅಳೆಯೋಣಾಗಲಿ! ಸಿಶ್ಚಿಂತೆಯಿಂದೀವೆನು ಮೂ ರಡಿ ನೆಲವನ್ನು.

ವಾಮನ: ಇಗೋ ನೋಡುತ್ತಿರು. ಇಗೋ ಒಂದಡಿ (ಒಂದಡಿ ಯಿಂದ ಭೂಮಂಡಲವನ್ನಳೆದು) ಇದೋ ಎರಡಡಿ (ಸ್ವರ್ಗವನ್ನಳೆದು) ಮೂರನೆಯ ಅಡಿಗೆ ಎಡೆಯೆಲ್ಲಿದೆ ಬಲಿರಾಯ?

ಬಲಿ: ದೇವಾ, ಎಲ್ಲವೂ ನಿನ್ನ ಲೀಲೆ, ಮೂರಡಿ ಎತ್ತರದ ನೀನು ಮೂರು ಲೋಕವನ್ನೇ ಅಳೆಯಹೊರಟಿರುವೆಯೆಂದರೆ ನೀನು ಸಾಮಾನ್ಯ ನಲ್ಲ! ಆಡಿದ ಮಾತಿಗೆ ತಪ್ಪಲಾರೆ. ಇದೋ ನನ್ನೀ ಶಿರಸ್ಸಿನ ಮೇಲೆ ಇನ್ನೊಂದಡಿಯನ್ನಿಡೋಣಾಗಲಿ! (ವಾಮನನ ಪಾದಮೂಲದಲ್ಲಿ ಮಂಡಿ ಯೂರಿ ತಲೆಬಾಗಿ ಕುಳಿತುಕೊಳ್ಳುವನು)

ವಾಮನ: ಇದು ನಿನ್ನ ಗರ್ವಾಪಹಾರಕ್ಕಾಗಿ ಆಡಿದ ನಾಟಕ. ದನವು ಹುಲ್ಲು ತಿಂದು ಹಾಲು ಕೊಡುವುದು. ಹಾವಿಗೆ ಹಾಲೆರೆದರೆ ಅದು ಹಾಲು ಕುಡಿದು ವಿಷಕಾರುವುದು. ದುರ್ಜನರು ಐಶ್ವರ್ಯ ಬಂದಾಗ ಮದೋನ್ಮತ್ತರಾಗಿ ಸಜ್ಜನರನ್ನು ಪೀಡಿಸುವರು. ಅಂತೆಯೇ ನೀನು ವರಬಲದಿಂದ ಉಬ್ಬಿ ಕೊಬ್ಬಿ ಇಂದ್ರಾದಿ ದೇವತೆಗಳನ್ನು ಸ್ಥಾನಭ್ರಷ್ಟ ರನ್ನಾಗಿಸಿ, ತಾನೇ ಸ್ವರ್ಗಾಧಿಪನೆಂಬ ಗರ್ವದಿಂದ ಮೈಮರೆತಿರುವಿ. ಅದ ಕ್ಕಾಗಿ ನಿನಗೀ ಪಾಠವನ್ನು ಕಲಿಸಬೇಕಾಯಿತು.

ಬಲಿ: ಪರಮಪುರುಷ, ನಿನ್ನ ಲೀಲೆಯನ್ನರಿಯದೆ ಅನ್ಯಾಯಗೈದೆ. ಗುರುವಚನವನ್ನು ಉಲ್ಲಂಘಿಸಿದೆ. ಸಾಧುಸಜ್ಜನರನ್ನು ಪೀಡಿಸಿದ ಪಾಪದ ಫಲವಾಗಿ ಈ ಗತಿಗೀಡಾದೆ. ದೇವಾ! ಅಜ್ಞಾನದಿಂದ ಕುರುಡಾಗಿದ್ದ

ಕಣ್ಣು ನಿನ್ನೀ ಸುದರ್ಶನದಿಂದ ತೆರೆಯಿತು. ಪ್ರಭೋ, ನಿನ್ನೀ ಪಾವನ ಪಾದವನ್ನು ಈ ಪಾಪಿಯ ತಲೆಯ ಮೇಲಿಟ್ಟು ಮುಕ್ತಿಯನ್ನು ಅನುಗ್ರಹಿಸು ದೇವಾ! (ಕೈಜೋಡಿಸಿ ಪ್ರಾರ್ಥಿಸುವನು.)

ವಾಮನ: ಅಸುರೇಶ್ವರ, ಈಗಲಾದರೂ ಕಣ್ದೆರೆಯಿತೇ? ಕೊನೆಗಾಲದಲ್ಲಾದರೂ ಜ್ಞಾನೋದಯವಾದುದರಿಂದ ನಿನ್ನನ್ನು ಕ್ಷಮಿಸುವೆನು. ಆದರೆ, 'ಬೆಂಕಿ ಮುಟ್ಟಿದರೆ ಸುಡದಿರದು' ಎಂಬಂತೆ ನಾನು ಮಾಡಿದ ಪಾಪಫಲವನ್ನು ಅನುಭವಿಸಿಯೇ ತೀರಬೇಕಾಗುತ್ತದು. ಇಗೋ, ಈ ಅಡಿಯನ್ನು ನಿನ್ನ ತಲೆಯ ಮೇಲಿಟ್ಟು ಮೂರಡಿ ಭರ್ತಿಗೊಳಿಸಿ ನಿನ್ನ ವಚನವು ಭ್ರಷ್ಟವಾಗದಂತೆ ಮಾಡಿರುವೆನು. (ತಲೆಯ ಮೇಲೆ ಅಡಿಯನ್ನಿಟ್ಟು ಪಾತಾಳಕ್ಕೆ ತಳ್ಳುವನು).

ಬಲಿ: ದೇವಾ, ನನ್ನದೊಂದು ಕೊನೆಯ ಬೇಡಿಕೆಯಿದೆ. ನಿನ್ನ ಅಪೇಕ್ಷೆಯನ್ನು ನಾನು ಪೂರೈಸಿಲ್ಲವೆ? ಈಗ ಭಕ್ತನಾದ ನನ್ನ ಅಲ್ಪಾಪೇಕ್ಷೆಯೊಂದನ್ನು ಪೂರೈಸಬೇಕು ಮಹಾಪ್ರಭೋ!

ವಾಮನ: ಏನದು? ಸಂಕೋಚವೇಕೆ, ಹೇಳು! ಭಕ್ತರ ಅಭೀಷ್ಟವನ್ನು ನೆರವೇರಿಸುವುದರಲ್ಲಿ ಸದಾ ನಾನು ಸಿದ್ಧನಾಗಿಯೇ ಇರುವೆನು.

ಬಲಿ: ದೇವಾ, ಹಾಗಿದ್ದರೆ ಪಾತಾಳಲೋಕದಲ್ಲಿ ನನ್ನ ಅರಮನೆಯ ಬಾಗಿಲು ಕಾಯುವವನಾಗಿದ್ದು ಅನುಗ್ರಹಿಸಬೇಕು. ಇದೇ ನನ್ನ ಪ್ರಾರ್ಥನೆ.

ವಾಮನ: (ಸ್ವಗತ) ಬಲಿಯ ಬಂಧನಕ್ಕಾಗಿ ನಾನೊಂದು ನಾಟಕ ಹೂಡಿದರೆ ಬಲಿಯು ಉಪಾಯದಿಂದ ನನ್ನನ್ನೆ ಹಗ್ಗವಿಲ್ಲದೆ ಬಂಧಿಸಿಬಿಟ್ಟನು. (ಪ್ರಕಾಶ) ಆಗಲಿ, ನಿನ್ನ ಇಷ್ಟದಂತೆಯೇ ಆಗಲಿ!

ಬಲಿ: ದೇವಾ, ನಾನು ಇದುತನಕ ಎಷ್ಟೋ ಅನ್ಯಾಯಗಳನ್ನು ಮಾಡಿರುವೆನು. ಭೂಲೋಕದ ಮಾನವರಾಗಲಿ, ದೇವಲೋಕದ ದೇವತೆಗಳಾಗಲಿ ಅದೊಂದನ್ನೂ ಎಣಿಸದೆ ನನ್ನನ್ನು ಮನ್ನಿಸುವಂತೆ ಅನುಗ್ರಹಿಸಬೇಕು. ಈ ದಿನ ಕಾರ್ತಿಕಮಾಸದ ಶುಕ್ಲಪಕ್ಷದ ಪ್ರತಿಪದೆಯ ದಿನ. ಇಂದು ನನ್ನ ಗರ್ವಾಪಹಾರವಾಗಿ ಜ್ಞಾನೋದಯವಾದ ದಿನವಾದುದರಿಂದ ಈ ದಿನವನ್ನು ಭೂಲೋಕದಲ್ಲಿ ನನ್ನ ಹೆಸರಿನಿಂದ 'ಬಲಿಪಾಡ್ಯ'ವೆಂಬುದಾಗಿ ಆಚರಿಸುವಂತೆ ಅನುಗ್ರಹಿಸಬೇಕು!

ವಾಮನ: ದೈತ್ಯೇಶ್ವರ. ನಿನ್ನ ಅಪೇಕ್ಷೆಗಳೆಲ್ಲವನ್ನೂ ನೆರವೇರಿಸುವೆನು. (ಅಭಯ ಹಸ್ತವನ್ನೆತ್ತಿ ಅನುಗ್ರಹಿಸುವನು.)

ಇಂದ್ರಾದಿದೇವತೆಗಳು: (ಪ್ರವೇಶಿಸಿ) ಪುರುಷೋತ್ತಮಾ, ನಿನ್ನ ಅಡಿದಾವರೆಗಳಿಗೆ ಸಾಷ್ಟಾಂಗ ಪ್ರಣಾಮಗಳು. ನಿನ್ನನ್ನು ಎಷ್ಟು ಸ್ತುತಿಸಿದರೂ ಸಾಲದು. ನಮ್ಮ ಬಂಧನ ಪರಿಹಾರಕ್ಕಾಗಿ ತಾನೇ ಬಂಧನಕ್ಕೊಳಗಾದೆಯಾ ಮಹಾತ್ಮಾ! ರಕ್ಷಿಸು! ರಕ್ಷಿಸು!

ವಾಮನ: ಲೋಕಕಲ್ಯಾಣಕ್ಕಾಗಿ ಜನಿಸಿದವರಿಗೆ ಸ್ವಸುಖವೆಂಬುದೇ ಇಲ್ಲ. ಮರವು ತಾನು ಬಿಸಿಲಿಗೆ ನಿಂತು ಆಶ್ರಿತರಿಗೆ ನೆಳಲನೀಯುವುದಿಲ್ಲವೆ? ಲೋಕಕಲ್ಯಾಣಕ್ಕಾಗಿ ಎಂಥ ಕಷ್ಟಪಡಲೂ ನಾನು ಸಿದ್ಧನು. ಇಂದೀಗ ಬಲಿಬಂಧನದಿಂದ ನಿಮ್ಮ ಬಂಧವಿಮೋಚನೆಯಾಯಿತಲ್ಲವೇ?

ಇಂದ್ರಾದಿಗಳು: ಶ್ರೀಹರೀ, ನಿನ್ನ ಲೀಲೆಯು ಅಗಾಧವಾದುದು! ನಿನ್ನ ಮಹಿಮೆಯು ಅನುಪಮವಾದುದು!

ವಾಮನ: ಇಂದ್ರಾದಿ ಸುರರ್ಕಳಿರಾ! ಇನ್ನು ಸದ್ಯ ಸ್ವರ್ಗಕ್ಕೆ ಅಸುರರ ಧಾಳಿಯಿರದು. ಅಮರಾವತಿಯು ಅಮರರದೇ ಎನಿಸಿತು. ದೇವೇಂದ್ರ ದಿಕ್ಪತಿಗಳಿರಾ, ಸುರರ್ಕಳಿರಾ, ನಿಮ್ಮ ಬಂಧವಿಮೋಚನೆಗಾಗಿ ಹೂಡಿದ ನಾಟಕವು ನಿರ್ವಿಘ್ನವಾಗಿ ಕೊನೆಗೊಂಡಂತಾಯಿತೆಂಬುದು ಸರ್ವರಿಗೂ ಸಂತೋಷದ ಸಮಾಚಾರ. ದೇವರಾಜ, ಇಂದೇ ಅಮರಾವತಿಗೈದಿ ಇಂದ್ರಪೀಠವನ್ನೇರಿ ಹಿಂದಿನಂತೆಯೇ ನಿರ್ಭಯವಾಗಿ ಸುರಲೋಕವನ್ನಾಳುವವನಾಗು. ಇನ್ನೇನಾಗಬೇಕು?

ದೇವೇಂದ್ರ: ಪುರುಷೋತ್ತಮ, ಇದಕ್ಕಿಂತಲೂ ಹೆಚ್ಚಿನದೇನಿದೆ? ಹಾಗೂ ಅನುಗ್ರಹಿಸುವುದಿದ್ದರೆ ಇಷ್ಟನ್ನು ಅನುಗ್ರಹಿಸೋಣಾಗಲಿ! ಕಾಲಕಾಲಕ್ಕೆ ಮಳೆಯು ಸುರಿದು ಇಳೆಯು ಬೆಳೆಯಿಂದ ತುಂಬಿ ದೇಶದಲ್ಲಿ ಕ್ಷಾಮಡಾಮರಗಳಿಲ್ಲದೆ ಸರ್ವರೂ ಸುಖದಿಂದ ಬಾಳುವಂತಾಗಲಿ!

ವಾಮನ: ತಥಾಸ್ತು! (ತೆರೆ.)

ಮೂವತ್ತೊಂದು ಏಕಾಂಕ ನಾಟಕಗಳು.

(ಕೆಲವು 16+4 ಪುಟಗಳು; ಮತ್ತೆ ಕೆಲವು 20+4 ಪುಟಗಳು)

'ಒಂದಾಣೆ ಮಾಲೆ'ಯಲ್ಲಿ ಪ್ರಕಟವಾದ ಮೂವತ್ತೊಂದು ಏಕಾಂಕ ನಾಟಕಗಳ ವಿವರ ಈ ಕೆಳಗಿನಂತಿದೆ

೧	ನಾರೀಶ್ವರರು (ಪ್ರಹಸನ)	ಕುಡ್ಪಿ ವಾಸುದೇವ ಶೆಣೈ.
೨	ಬಾಬಿಗೆ ಬಾಸಿಂಗ ,,	,, ,, ,,
೩	ಸತ್ಯವಂತ ಬಾಬಿ ,,	,, ,, ,,
೪	ಮಂಜಿ ,,	ಡಾ| ಎಮ್. ಎನ್. ಕಾಮತ್.
೫	ಸತೀ ಸಾವಿತ್ರಿ (ಪೌರಾಣಿಕ)	ಶ್ರೀ| ಪಿ. ವೆಂಕಟ್ರಮಣ ಭಟ್ಟ.
೬	ಅಕಾಂಡ ತಾಂಡವ (ರೇಡಿಯೊನಾಟಕ)	ಶ್ರೀ| ಬಿ. ದಾಮೋದರ ಬಾಳಿಗ, ಬಿ. ಎ.
೭	ಮೀರಾಬಾಯಿ (ಐತಿಹಾಸಿಕ)	ಶ್ರೀ| ಸಂ. ಜ. ರಾವ್.
೮	ಚುಟ್ಟಿ ಬಿಟ್ಟಿ ದಿಟ್ಟಿ (ಪ್ರಹಸನ)	ಡಾ| ಎಸ್. ಪಿ. ಭಟ್.
೯	ಜರಾಸಂಧ ವಧೆ (ಪೌರಾಣಿಕ)	ಶ್ರೀ| ಎ. ವಿ. ಮಯ್ಯ.
೧೦	ಸತ್ಯಹರಿಶ್ಚಂದ್ರ (ಪೌರಾಣಿಕ)	ಶ್ರೀ| ಪಿ. ವೆಂಕಟ್ರಮಣ ಭಟ್ಟ.
೧೧	ಮಾಯಾಮೃಗ (,,)	ಶ್ರೀ| ಎ. ವಿ. ಮಯ್ಯ.
೧೨	ಸತೀವೃಂದಾ (,,)	ಶ್ರೀ| ಕೆ. ಸುಭಾಷಚಂದ್ರ ಶೆಣೈ.
೧೩	ಗೌತಮನ ಗೃಹತ್ಯಾಗ, ಸಿದ್ಧಾರ್ಥನ ಕಾರುಣ್ಯ	ಶ್ರೀ| ಎಲ್. ಎಸ್. ನಾಯಕ.
೧೪	ಪುನರುಜ್ಜೀವನ (ಸಾಮಾಜಿಕ)	ಶ್ರೀ| ಗೋವಿಂದ ಭಟ್ಟ.
೧೫	ಸ್ವಾತಂತ್ರ್ಯ (,,)	ಶ್ರೀ| ಕೆ. ಎನ್. ಭಟ್, ಶಿರಾಡಿಪಾಲ್.
೧೬	ಭಕ್ತ ಕುಚೇಲ (ಪೌರಾಣಿಕ)	ಶ್ರೀ| ಅಂಬಾತನಯ.
೧೭	ಮದ್ವೆ ಅವಾಂತರ (ಪ್ರಹಸನ)	ಅಷ್ಟಾವಕ್ರ.
೧೮	ಗ್ರಾಮಸ್ವಾತಂತ್ರ್ಯ ,,	ಶ್ರೀ| ಎ. ವಿ. ಮಯ್ಯ.
೧೯	ಭಕ್ತ ಧ್ರುವ (ಪೌರಾಣಿಕ)	ಶ್ರೀ| ಸುಬ್ರಾಯ.
೨೦	ಬೇಡನ ಮಗಳು ,,	ಶ್ರೀ| ವೆಂಕಟರಾಜ ಪುಣಿಂಚತ್ತಾಯ.
೨೧	ಪುರಂದರದಾಸರು (ಐತಿಹಾಸಿಕ)	ಬಿ. ಪದ್ಮನಾಭ ಸೋಮಯಾಜಿ.
೨೨	ವೀರಾಗ್ರಣಿ ಕರ್ಣ (ಪೌರಾಣಿಕ)	ಶ್ರೀ| ಅಮ್ಮೆಂಬಳ ಅನಂತಯ್ಯ ನಾವಡ.
೨೩	ಕುಶ-ಲವ ,,	ಶ್ರೀ| ಬಿ. ಈಶ್ವರಯ್ಯ.
೨೪	ಅಕ್ಷಯಪಾತ್ರೆ (ಸಾಮಾಜಿಕ)	ಶ್ರೀ| ಟಿ. ಚಂದ್ರರಾಜ ಸೆಟ್ಟಿ
೨೫	ವೈರಾಗ್ಯಸಿಧಿ (ತರಂಗರೂಪಕ)	ಶ್ರೀ| ಕೆ. ಎಸ್. ಶರ್ಮ, ವಿದ್ವಾನ್.
೨೬	ಭರತನ ಬಂಧುಪ್ರೇಮ (ಪೌರಾಣಿಕ)	ಶ್ರೀ| ಅಮ್ಮೆಂಬಳ ಅನಂತಯ್ಯ ನಾವಡ.
೨೭.	ಮಹಾತ್ಮಾ ಉದಂಕ (,,)	ಶ್ರೀ| ಮಣಿಲ 'ಶಿವಶಂಕರ', ಪುಣಚಾ.
೨೮.	ಭಕ್ತ ಪ್ರಹ್ಲಾದ (,,)	ಶ್ರೀ| ಎ. ವಿ. ಮಯ್ಯ.
೨೯.	ಅಭಿಮನ್ಯು ,,	ಶ್ರೀ| ಬಿ. ಈಶ್ವರಯ್ಯ.
೩೦.	ವಿಷಬೀಜ ,,	ಶ್ರೀ| ಕೆ. ಗೋವಿಂದ ಭಟ್ಟ.
೩೧.	ಬಲಿ ಬಂಧನ ,,	ಶ್ರೀ| ಎಸ್. ತಿರುಮಲೇಶ್ವರ ಭಟ್.

ಒಂದಾಣೆ ಮಾಲೆ, ಪ್ರಭಾತ ಆಫೀಸು, ರಥಬೀದಿ, ಮಂಗಳೂರು.

Edited, Printed & Published by K. V. Shenoy
at the Prabhat Printers, Ltd., Mangalore.